ದಿನಾಂಕ 31.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- 5 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಐ.ಆರ್.ಪಿ ರವರಿಂದಃ-**

ಈ ದಾವೆಯನ್ನು ಲವರವರು ಮೊಣ್ಣಪ್ಪರವರ ವಿರುದ್ಧ ಹೂಡಿರುತ್ತಾರೆ. ಸರ್ವೆ ನಂ. 73/3 ವಿಸ್ತೀರ್ಣ 1.50 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ದಾವೆ ಹೂಡಿದ್ದು, ಸದರಿ ಸ್ವತ್ತು ಮೊಣ್ಣಪ್ಪ ರವರ ಹೆಸರಿನಲ್ಲಿ ಇದ್ದು, ಅದರ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ನಮ್ಮ ಮನೆಯಿಂದ ದಾವಾಸ್ವತ್ತಿಗೆ ಒಂದೂವರೆ ಕಿ.ಮೀ ಅಂತರವಿದೆ. ದಾವಾಸ್ವತ್ತಿನಲ್ಲಿ 80 ವರ್ಷದ ಕಾಫಿ ಗಿಡಗಳು ಇವೆ. 5 ನೇ ಪ್ರತಿವಾದಿಗೆ ಸರ್ವೆ ನಂ. 61 ರಲ್ಲಿ ಕಾಫಿ ತೋಟ ಇದ್ದು, ಅದರ ವಿಸ್ತೀರ್ಣ ಮತ್ತು ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಸದರಿ ಕಾಫಿ ಗಿಡಗಳು 80 ವರ್ಷಗಳಷ್ಟು ಹಳೆಯ ಗಿಡಗಳಾಗಿವೆ. ದಾವಾಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾಸ್ವತ್ತಿನಲ್ಲಿ ಕಡಂಗ ಇರುವ ವಿಚಾರ ನನಗೆ ಗೊತ್ತಿಲ್ಲ.

ವಾದಿ ಮತ್ತು 5 ನೇ ಪ್ರತಿವಾದಿಯ ಸ್ವತ್ತುಗಳ ಮಧ್ಯೆದಲ್ಲಿ ಕಡಂಗ ಇದ್ದು, ಆ ಬಗ್ಗೆ ಅವರ ನಡುವೆ ವಿವಾದ ಇದೆ. ಕಡಂಗವನ್ನು ನಾನು ನೋಡಿರುವುದಿಲ್ಲ. ಕಡಂಗವನ್ನು ಅಳತೆ ಮಾಡಿರುವುದನ್ನು ಸಹಾ ನಾನು ನೋಡಿರುವುದಿಲ್ಲ. ಅಳತೆಯಾದ ವಿಚಾರವೂ ಸಹಾ ನನಗೆ ಗೊತ್ತಿಲ್ಲ. ವಿವಾದದ ಬಗ್ಗೆ ವಾದಿಯು ಹೇಳಿದ ಮೇರೆಗೆ ನನಗೆ ಗೊತ್ತಾಗಿರುತ್ತದೆ. ವಾದಿ ಮತ್ತು 5 ನೇ ಪ್ರತಿವಾದಿಯ ನಡುವೆ ಏನು ವಿವಾದ ಇದೆ ಹಾಗೂ ದಾವೆಯಲ್ಲಿ ಏನು ಪರಿಹಾರವನ್ನು ಕೋರಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ವಾದಿಯೊಂದಿಗೆ ಅನೋನ್ಯವಾಗಿ ಇರುವುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನಿಂದ ತುಂಬಾ ದೂರದಲ್ಲಿ ಇರುವುದರಿಂದ ದಾವಾಸ್ವತ್ತನ್ನು ಯಾವತ್ತೂ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ವೈಯಕ್ತಿಕ

ಮಾಹಿತಿ ಇಲ್ಲದೇ ಇದ್ದರೂ ಸಹಾ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.